ಳ, ಆಯಾ ಕಾಲಕ್ಕೆ ಈ ನಿಧಿ ಪ್ರಾಧಿಕಾರದ ರೇಷ್ಮೆ ನೂಲಿಗೆ ತಳಿ ಬೆಲೆ ನಿಗದಿಪಡಿಸುವುದು.

ಙ, ರೇಷ್ಮೆ ಮೊಟ್ಟೆ, ಗೂಡು ಮತ್ತು ನೂಲನ್ನು ಪರೀಕ್ಷಿಸಲು ಮತ್ತು ವರ್ಗೀಕರಿಸಲು ಸೌಲಭ್ಯಗಳನ್ನು ಕಲ್ಪಿಸುವುದು.

ಸ್ವಾಮಿ, ಕಳೆದ ವರ್ಷ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ದೀರ್ಘವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಇಪ್ಪತ್ತಿನ ಉತ್ತರದಲ್ಲಿ ಕೂಡ ದೀರ್ಘವಾಗಿ ಅಂಕಿ ಸಂಖ್ಯೆಗಳನ್ನು ಕೊಡಲಾಗಿದೆ. ಮಾನ್ಯ ಸದಸ್ಯರು ಕ್ವಾರಿಫಿಕೇಷನ್ ಬೇಕಾದರೆ ಕೇಳಬಹುದು.

ಶ್ರೀ ಜಿ. ರಾಜುಗೌಡ —ಮಾರುಕಟ್ಟೆ ಶುಲ್ಕವಾಗಿ ಸುಮಾರು ೩೩ ಕೋಟಿ ರೂಪಾಯಿಗಳನ್ನು ವಸೂಲು ಮಾಡಿ ಕೇವಲ ೨೭ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೇವೆಂದು ಹೇಳಿದ್ದೀರಿ. ೧೦೦ ರೂಪಾಯಿ ಸಂಪಾದನೆ ಮಾಡಿ, ಒಂದು ರೂಪಾಯಿ ಕೂಡ ಖರ್ಚು ಮಾಡಿಲ್ಲ. ಉಳಿದಿರತಕ್ಕ ದುಡ್ಡು ದುರುಪಯೋಗವಾಗಿದೆಯೇ ಬೇರೆ ಬಾಬುಗಳಿಗೆ ಖರ್ಚು ಮಾಡಲಾಗಿದೆಯೆ? ಮಾರ್ವಾಡಿಗಳ ತರಹ ಹಣವನ್ನು ಮನೆಯಲ್ಲಿಟ್ಟುಕೊಳ್ಳಲಾಗಿದೆಯೆ?

ಶ್ರೀ ವೈ.ಕೆ. ರಾಮಯ್ಯ —ಈಗ ವಸೂಲಾಗಿರುವ ಹಣ ೧೭ ಕೋಟಿ ಒಂದು ಲಕ್ಷ ೭೭ ಸಾವಿರ ರೂಪಾಯಿಗಳು ಮಾರ್ಕೆಟ್ಟುಗಳಿಂದ ವಿನಿಮಯ ಕೇಂದ್ರದಿಂದ.....

ಶ್ರೀ ಜಿ. ರಾಜುಗೌಡ —ಸ್ವಾಮಿ, ನಾನು ಆದನ್ನು ಕೇಳುತ್ತಿಲ್ಲ. ೩೩ ಕೋಟಿ ರೂಪಾಯಿ ಗಳನ್ನು ವಸೂಲು ಮಾಡಿ ೨೭ ಲಕ್ಷ ಮಾತ್ರ ಖರ್ಚು ಮಾಡಿದ್ದೀರಿ. ಉಳಿದ ಹಣ ದುರುಪಯೋಗ ವಾಗಿದೆಯೆ? ಬೇರೆ ಬಾಬುಗಳಿಗೆ ಖರ್ಚು ಮಾಡಲಾಗಿದೆಯೇ? ಮಾರ್ವಾಡಿಗಳ ತರಹ ಹಣವನ್ನು ಪೆಟ್ಟಿಗೆಯಲ್ಲಿ ಇಟ್ಟುಕೊಳ್ಳಲಾಗಿದೆಯೆ?

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ವಸೂಲು ಮಾಡಿರತಕ್ಕ ಹಣ ೨೫ ಕೋಟಿ ೨೮ ಲಕ್ಷ ಚಿಲ್ಲರೆ ಡಿಸೆಂಬರ್ ಕೊನೆಯವರೆಗೆ. ಮಾನ್ಯ ಸದಸ್ಯರು ತಿಳಿದುಕೊಂಡಿರುವಂತೆ ದುರುಪ ಯೋಗವೂ ಆಗಿಲ್ಲ. ದುರ್ವ್ಯವಹಾರವೂ ಆಗಿಲ್ಲ. ಮಾರ್ವಾಡಿಗಳ ತರ ಪೆಟ್ಟಿಗೆಯಲ್ಲೂ ಇಟ್ಟು ಕೊಂಡಿಲ್ಲ. ನನ್ನ ಜೇಬಿನಲ್ಲೂ ಕೂಡ ಇಟ್ಟುಕೊಂಡಿಲ್ಲ. ಬೆಲೆ ಸ್ಥಿರೀಕರಣ ನಿಧಿಯನ್ನು ಸರ್ಕಾರ ಕಾನೂನುಬದ್ಧವಾಗಿ ಸೃಷ್ಟಿಸಿದೆ. ಆ ನಿಧಿಗೆ ಈ ಹಣ ಹೋಗುತ್ತದೆ. ಅದರಲ್ಲಿ ೨೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ರೇಷ್ಮೆ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡಿದ್ದೇವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಭಾಗೀಯ ಸಾರಿಗೆ ಪ್ರಾಧಿಕಾರದವರಿಂದ ಹೊಸ ಬಸ್ಸು ಸಂಚಾರ ಏರ್ಪಡಿಸಲು ಅರ್ಜಿಗಳನ್ನು ಸ್ವೀಕರಿಸಲಾಗಿದೆಯೇ.

೪೫೧. ಶ್ರೀ ಜಿ. ಎಸ್. ಆಚಾರ್ (ಬ್ರೈಂದೂರು).—ಮಾನ್ಯ ಸಾರಿಗೆ ಮತ್ತು ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ವಿಭಾಗೀಯ ಸಾರಿಗೆ ಪ್ರಾಧಿಕಾರಕ್ಕೆ (ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿ) ಕೊಲ್ಲೂರು ಹಾಗೂ ಬಾಳೆಬರೆ ಘಾಟ್ ರಸ್ತೆಗಳ ಮೂಲಕ ಹೊಸ ಬಸ್ ಸಂಚಾರ ಏರ್ಪಡಿ ಸಲು ಆಸಕ್ತರಿಂದ ಅರ್ಜಿಗಳು ಬಂದಿವೆಯೆ ಹಾಗೂ ಬಂದಿರುವ ಅರ್ಜಿಗಳೆಷ್ಟು ?

ಆ) ಪ್ರಯಾಣಿಕರ ಸೌಕರ್ಯಕ್ಕಾಗಿ ಹೊಸ ಬಸ್ ಸಂಚಾರ ಆಗತ್ಯವೆಂದು ಸಾರ್ವಜನಿಕರು ಅಭಿ ಪ್ರಾಯ ಪಟ್ಟಿದ್ದರೂ, ಈ ಬಗ್ಗೆ ವಿಳಂಬಕ್ಕೆ ಕಾರಣಗಳೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು). —

ಅ) ಹೌದು. ೮ ಅರ್ಜಿಗಳು.

ಆ) ಮೋಟಾರು ವಾಹನ ಕಾಯ್ದೆ ೧೯೫೯ ಪ್ರಕರಣ ೫೭ (೩) ರಲ್ಲಿ ನಮೂದಿಸಿರುವ ಈ ಕೆಳ ಕಂಡ ಶಾಸನಬದ್ಧ ಕ್ರಮವನ್ನು ಅನುಸರಿಸುವಲ್ಲಿ ಸ್ವಲ್ಪ ವಿಳಂಬವಾಗುವುದು.

೧) ಮಾರ್ಗಗಳ ಪ್ರೋಜಣಿ ವರದಿಯಂನ್ನು ಕರೆಯುವುದು.

೨) ಮಾರ್ಗಗಳು ಮೋಟಾರು ಸಂಚಾರಕ್ಕೆ ಯೋಗ್ಯವೇ ಎಂಬುದರ ಬಗ್ಗೆ ಕಾರ್ಯಾಂಗ ಅಭ್ಯಂತರರಿಂದ ವರದಿಗಳು.

೩) ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಪ್ರಕಟಣೆ.

೪) ಅಧಿಸೂಚನೆಯ ಪ್ರಕಟಣೆಯಂ ನಂತರ ಆಹವಾಲುಗಳನ್ನ ಸ್ವೀಕರಿಸಲು ೩೦ ದಿನಗಳ ಕಾಲಾವಕಾಶ.

ಶ್ರೀ ಜಿ. ಎಸ್. ಆಚಾರ್.—ಈ ಪ್ರಶ್ನೆಯನ್ನು ಕಳುಹಿಸಿದ ನಂತರ ಕೆಲವು ವರದಿಗಳು ಬಂದಿದೆ. ನನಗೆ ತಿಳಿದ ಪ್ರಕಾರ ಇತ್ತೀಚೆಗೆ ಆರ್.ಟಿ.ಓ. ಅವರು ಪರ್ಮಿಟ್ ಕೊಡುವಾಗ ನಿರುದ್ಯೋಗಿಗಳಿಗೆ ಕೊಡುವುದನ್ನು ತಿರಸ್ಕಾರ ಮಾಡುತ್ತಿದ್ದಾರೆ. ಸಂಚಾರ ಒತ್ತಡ ಇರುವ ಘಟ್ಟಪ್ರದೇಶಗಳಲ್ಲಿ ಪಟ್ಟಭದ್ರಹಿತಾಸಕ್ತಿಗಳ ಇಚ್ಛೆಗನುಗುಣವಾಗಿ ಹೊಸ ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಆ ರೀತಿ ಮಾಡುತ್ತಿದ್ದರೆ ಅದನ್ನು ಪುನರ್ ಪರಿಶೀಲನೆ ಮಾಡುತ್ತೀರಾ ?

ಶ್ರೀ ಹೆ. ಜಿ. ಆರ್. ಸಿದ್ಧಯ್ಯ.—ಪರ್ಮಿಟ್‌ಗಳನ್ನು ಕೊಡುವಾಗ ಎಲ್ಲಾ ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಆಕಸ್ಮಾತ್ ನಿಯಮಗಳನ್ನು ಅನುಸರಿಸದೆ ಇದ್ದರೆ ಅದರ ಬಗ್ಗೆ ಆರೋಪಗಳು ನನ್ನ ಮೇಲೆ, ಸರ್ಕಾರದ ಮೇಲೆ ಬರತಕ್ಕದ್ದು ಇದೆ, ನಿಯಮಗಳನ್ನು ಬಿಟ್ಟು ಯಾವುದೇ ಪರ್ಮಿಟ್‌ಗಳನ್ನು ಕೊಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಟ್ರಾಫಿಕ್‌ಗೆ ಸಂಬಂಧಪಟ್ಟ ಹಾಗೆ ಹೇಳಿದ್ದಾರೆ, ಅದರ ಬಗ್ಗೆ ನನ್ನ ಕಛೇರಿಯಲ್ಲಿ ಬಂದು ಹೇಳಿದರೆ, ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮಾತನಾಡಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಪೊನ್ನಂಪೇಟೆಯಲ್ಲಿ ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆಯ ಸ್ಥಾಪನೆ.

೬೯೦. ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ).—ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿರಾಜಪೇಟೆ ತಾಲ್ಲೂಕಿನ ಪೊನ್ನಂಪೇಟೆಯಲ್ಲಿರುವ ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆ ಕಾಲೇಜಿನಲ್ಲಿ ಯಾವ ಯಾವ ಶಾಖೆಗಳು ಹಾಗೂ ಯಾವ ವಿಷಯಗಳು ಇವೆ ?

ಆ) ಯಾವ ಯಾವ ವಿಷಯಗಳಲ್ಲಿ ಎಷ್ಟೆಷ್ಟು ಮಹಿಳೆಯರು ಕಲಿಯುತ್ತಿದ್ದಾರೆ ?

ಇ) ಯಾವ ಯಾವ ವಿಷಯಗಳಲ್ಲಿ ಎಷ್ಟೆಷ್ಟು ಅರ್ಹತಾ ಉಪನ್ಯಾಸಕರಿದ್ದಾರೆ ?

ಈ) ಕಾಲೇಜಿಗೆ ಸರಿಯಾದ ಕಟ್ಟಡ ಮತ್ತು ಕಾರ್ಯಗಾರ ಇದೆಯೆ ?

ಉ) ಈ ಕಾಲೇಜಿನಲ್ಲಿ ಕಳೆದ ಸಾರಿ ಎಲ್ಲಾ ವಿದ್ಯಾರ್ಥಿಗಳು ಅನುತ್ತೀರ್ಣರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ?

ಊ) ಬೆಳಗಾಂ, ಗುಲ್ಬರ್ಗ ಹಾಗೂ ಶಿವಮೊಗ್ಗಗಳಲ್ಲಿರುವ ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆ ಕಾಲೇಜುಗಳು ಯಾವ ಸ್ಥಿತಿಯಲ್ಲಿವೆ ?

ಋ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಸಚಿವರು).—

ಅ) ಪೊನ್ನಂಪೇಟೆ ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಈ ಕೆಳಗಿನ ನಾಲ್ಕು (೪) ವೃತ್ತಿಗಳಲ್ಲಿ ತರಬೇತಿಯನ್ನು ಕೊಡಲಾಗುತ್ತಿದೆ.

೧) ಸೆಕ್ರೆಟೇರಿಯಲ್ ಪ್ರಾಕ್ಟೀಸ್

೨) ಮೆಕ್ಯಾನಿಕ್ ರೇಡಿಯೋ ಮತ್ತು ಟಿ.ವಿ.

೩) ಮೆಕ್ಯಾನಿಕ್ ಜನರಲ್ ಎಲೆಕ್ಟ್ರಾನಿಕ್ಸ್.

೪) ಇನ್‌ಸ್ಟ್ರುಮೆಂಟ್ ಮೆಕ್ಯಾನಿಕ್.